**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. | 1010 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12–03–2020 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಯಾವ ಯಾವ ವಿಧದ ಮದ್ಯದಂಗಡಿಗಳು ಚಾಲ್ತಿಯಲ್ಲಿವೆ: | ರಾಜ್ಯದಲ್ಲಿ ಪ್ರಸ್ತುತ ಕೆಳಕಂಡ ರೀತಿಯ ಮದ್ಯದಂಗಡಿಗಳು ಚಾಲ್ತಿಯಲ್ಲಿವೆ.<br>1. **ಸಿಎಲ್–2:** ಚಿಲ್ಲರೆ ಮದ್ಯದಂಗಡಿ,<br>2. **ಸಿಎಲ್–4:** ಕ್ಲಬ್ ಲೈಸೆನ್ಸ್,<br>3. **ಸಿಎಲ್–5: ಸಾಂದರ್ಭಿಕ ಸನ್ನದು.**<br>4. **ಸಿಎಲ್–6ಎ:** ಸ್ಟಾರ್ ಹೋಟೆಲ್,<br>5. **ಸಿಎಲ್–7:** ಹೋಟೆಲ್ ಅಂಡ್ ಬೋರ್ಡಿಂಗ್ ಹೌಸ್ ಲೈಸೆನ್ಸ್,<br>6. **ಸಿಎಲ್–7ಎ:** ಪ್ರವಾಸೋದ್ಯಮ ಹೋಟೆಲ್ ಲೈಸೆನ್ಸ್,<br>7. **ಸಿಎಲ್–7ಬಿ:** ಪ್ರವಾಸೋದ್ಯಮ ಹೋಟೆಲ್ ಬಿಯರ್ ಬಾರ್ ಲೈಸೆನ್ಸ್,<br>8. **ಸಿಎಲ್–7ಸಿ:** ರಾಜ್ಯ ಸರ್ಕಾರದಿಂದ ಅಥವಾ ಕೇಂದ್ರ ಸರ್ಕಾರದಿಂದ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಡಿಯಲ್ಲಿ ಸಂಚರಿಸುವ ರೈಲಿನಲ್ಲಿ ಮದ್ಯ ಸರಬರಾಜು ಮಾಡಲು ನೀಡುವ ಸನ್ನದು.<br>9. **ಸಿಎಲ್–8:** ಮಿಲಿಟರಿ ಕ್ಯಾಂಟೀನ್,<br>10. **ಸಿಎಲ್–8ಎ:** ಮಿಲಿಟರಿ ಕ್ಯಾಂಟೀನ್ ಸ್ಟೋರ್ಸ್ ಬಾಂಡೆಡ್ ವೇರ್ ಹೌಸ್ ಸನ್ನದು,<br>11. **ಸಿಎಲ್–8ಬಿ:** ಬಾರ್ಡರ್ ಸೆಕ್ಯೂರಿಟಿ ಫೋರ್ಸ್ ಅಥವಾ ಪ್ಯಾರಾ ಮಿಲಿಟರಿ ಫೋರ್ಸ್ ಸನ್ನದು,<br>12. **ಸಿಎಲ್–9:** ರಿಫ್ರೆಷ್ಮೆಂಟ್ ರೂಂ (ಬಾರ್) ಸನ್ನದು,<br>13. **ಸಿಎಲ್–11:** ಡಿಸ್ಟ್ರಿಬ್ಯೂಟರ್ಸ್ ಸನ್ನದು.<br>14. **ಸಿಎಲ್–11ಸಿ:** ಸರ್ಕಾರಿ ಕಂಪೆನಿಗಳಿಗೆ ನೀಡಲಾಗುವ ಚಿಲ್ಲರೆ ಮದ್ಯದಂಗಡಿ ಸನ್ನದು (ಉದಾ:ಎಂ.ಎಸ್.ಐ.ಎಲ್)<br>15. **ಸಿಎಲ್–14:** ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಂಕ ರಹಿತ ಮದ್ಯ ಮಾರಾಟ ಮಳಿಗೆ ಸನ್ನದು.<br>16. **ಸಿಎಲ್–15:** ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಿಫ್ರೆಷ್ಮೆಂಟ್ ರೂಂ (ಬಾರ್) ಸನ್ನದು,<br>17. **ಆರ್.ವಿ.ಬಿ:** ಸಿಎಲ್–2 ಸನ್ನದಿಗೆ ಹೊರತುಪಡಿಸಿ ಇತರೆ ಸನ್ನದುಗಳಿಗೆ ಹೊಂದಿಕೊಂಡಂತೆ ಡ್ರಾಟ್ ಬಿಯರ್ ಸರಬರಾಜು ಮಾಡಲು ನೀಡುವ ಸನ್ನದು,<br>18. **ವೈನ್ ಟಾವರಿನ್:** ರಿಫ್ರೆಷ್ಮೆಂಟ್ ರೂಂ (ವೈನ್) ಸನ್ನದು<br>19. **ವೈನ್ ಬೂಟಿಕ್:** ಚಿಲ್ಲರೆ ವೈನ್ (ಬಾಟಲ್‌ಗಳಲ್ಲಿ) ಮಾರಾಟ ಮಳಿಗೆ<br>20. **ಮೈಕ್ರೋಬ್ರೀವರಿ:** ಪ್ರತಿದಿನ ಕನಿಷ್ಠ 1000 ಲೀಟರ್ ಡ್ರಾಟ್ ಬಿಯರ್ ಉತ್ಪಾದನಾ ಸಾಮರ್ಥ್ಯವುಳ್ಳ ಸಣ್ಣ ಪ್ರಮಾಣದ ಬ್ರೀವರಿ ಸನ್ನದು. |

...2

| | | |
|---|---|---|
| (ಆ) | ಹೊಸದಾಗಿ ನೀಡಲಾಗುತ್ತಿರುವ ಪರವಾನಿಗೆಗಳು ಯಾವುವು: | ರಾಜ್ಯದಲ್ಲಿ ಸಿಎಲ್–4, ಸಿಎಲ್–5, ಸಿಎಲ್–6ಎ, ಸಿಎಲ್–7, ಸಿಎಲ್–7ಬಿ, ಸಿಎಲ್–7ಸಿ, ಸಿಎಲ್–8, ಸಿಎಲ್–8ಎ, ಸಿಎಲ್–8ಬಿ, ಸಿಎಲ್–11, ಸಿಎಲ್–11ಸಿ, ಸಿಎಲ್–14, ಸಿಎಲ್–15, ಆರ್.ವಿ.ಬಿ(ಅಟ್ಯಾಚ್ಡ್), ವೈನ್ ಟಾವರಿನ್, ವೈನ್ ಬೂಟಿಕ್ ಮತ್ತು ಮೈಕ್ರೋಬ್ರೀವರಿ ರೀತಿಯ ಪರವಾನಿಗೆಗಳನ್ನು ನೀಡಲಾಗುತ್ತಿದೆ. |
| (ಇ) | ಪ್ರಸ್ತುತ ಯಾವ ಯಾವ ಮಾದರಿಯ ಮದ್ಯದಂಗಡಿಗಳನ್ನು ಹೊಸದಾಗಿ ಪ್ರಾರಂಭಿಸಲು ತಡೆಹಿಡಿಯಲಾಗಿದೆ: ತಡೆಹಿಡಿಯಲಾಗಿರುವ ಯಾವ ಮಾದರಿಯ ಮದ್ಯದಂಗಡಿಗಳನ್ನು ಪುನಃ ಪ್ರಾರಂಭಿಸಲು ಅನುಮತಿ ನೀಡಲಾಗುವುದು: | ಪ್ರಸ್ತುತ ಸಿಎಲ್–2 ಮತ್ತು ಸಿಎಲ್–9 ಮಾದರಿಯ ಮದ್ಯದಂಗಡಿಗಳನ್ನು ಹೊಸದಾಗಿ ಪ್ರಾರಂಭಿಸಲು ತಡೆಹಿಡಿಯಲಾಗಿದೆ:<br><br>ತಡೆಹಿಡಿಯಲಾಗಿರುವ ಮೇಲ್ಕಂಡ ಮಾದರಿಯ ಮದ್ಯದಂಗಡಿಗಳನ್ನು ಪುನಃ ಪ್ರಾರಂಭಿಸಲು ಅನುಮತಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| (ಉ) | ಮದ್ಯದಂಗಡಿಗಳನ್ನು ಪ್ರಾರಂಭಿಸಲು ಇರುವ ನೀತಿ ನಿಯಮಗಳೇನು? (ಸಂಪೂರ್ಣ ವಿವರವನ್ನು ನೀಡುವುದು) | ವಿವಿಧ ರೀತಿಯ ಪರವಾನಗಿಗಳನ್ನು ನೀಡುವಾಗ ಈ ಕೆಳಕಂಡ ನಿಯಮಗಳಡಿಯಲ್ಲಿನ ನಿಯಮಗಳನ್ನು ಪಾಲಿಸಿ ನೀಡಲಾಗುತ್ತಿದೆ.<br><br>1) **<u>ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–8, ಸನ್ನದುಗಳು:</u>** ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ರಡಿಯಲ್ಲಿನ ನಿಯಮಗಳಲ್ಲಿ ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳು ಮತ್ತು ಕರ್ನಾಟಕ ಅಬಕಾರಿ ಸನ್ನದುಗಳು (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967 ರಲ್ಲಿನ ನಿಯಮಗಳಡಿ ರೂಪಿಸಿರುವ ನಿರ್ಬಂಧಗಳು.<br>2) **<u>ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–9 ಸನ್ನದುಗಳಿಗೆ ಹೊಂದಿಕೊಂಡಿರುವ ಆರ್ ವಿ ಬಿ ಸನ್ನದುಗಳು:</u>**<br>ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ಬಿಯರ್ ಮಾರಾಟ ಮಾಡುವ ಗುತ್ತಿಗೆ) ನಿಯಮ 1976 ರಡಿಯಲ್ಲಿನ ನಿಯಮಗಳು ಮತ್ತು ಕರ್ನಾಟಕ ಅಬಕಾರಿ ಸನ್ನದುಗಳ ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳು ಮತ್ತು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967 ರಲ್ಲಿನ ನಿಯಮಗಳಡಿ ರೂಪಿಸಿರುವ ನಿರ್ಬಂಧಗಳು.<br>3) **<u>ಮೈಕ್ರೋಬ್ರಿವರಿ ಸನ್ನದುಗಳು:</u>** ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಬ್ರೀವರಿ) (ತಿದ್ದುಪಡಿ) ನಿಯಮಗಳು 2010 ರಡಿಯಲ್ಲಿ ರೂಪಿತವಾಗಿರುವ ನಿಯಮಗಳು ಮತ್ತು ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳು ಮತ್ತು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967 ರಲ್ಲಿನ ನಿಯಮಗಳಡಿ ರೂಪಿಸಿರುವ ನಿರ್ಬಂಧಗಳು. |

| | | |
|---|---|---|
| | | 4) **ವೈನ್ ಟಾವರಿನ್/ವೈನ್ ಬೋಟಿಕ್ ಸನ್ನದುಗಳು:** ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ವೈನ್‌ನ್ನು ಮಾರಾಟ ಮಾಡುವ ಹಕ್ಕು) ನಿಯಮಗಳು 2008 ರಡಿಯಲ್ಲಿನ ನಿಯಮಗಳು, ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967 ರಲ್ಲಿನ ನಿಯಮಗಳಡಿ ರೂಪಿಸಿರುವ ನಿರ್ಬಂಧಗಳು.<br><br>ಮುಂದುವರೆದು, ಈ ಎಲ್ಲಾ ಸನ್ನದುಗಳನ್ನು ಮಂಜೂರು ಮಾಡುವಾಗ ಅರ್ಜಿದಾರರುಗಳು ಕರ್ನಾಟಕ ಅಬಕಾರಿ (ದೇಶೀ ಮತ್ತು ವಿದೇಶೀ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4(ಬಿ) ಪ್ರಕಾರ ಮತ್ತು ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಗಳು 1967 ರ ನಿಯಮ 5(ಬಿ) ರನ್ವಯ ಅನರ್ಹರಾಗದಿರುವ ಬಗ್ಗೆ ಸ್ವಯಂಘೋಷಿತ ಮುಚ್ಚಳಿಕೆಯನ್ನು ಪಡೆಯಲಾಗುತ್ತಿರುತ್ತದೆ. |

11/3/20

(ಎಚ್. ನಾಗೇಶ)
ಅಬಕಾರಿ ಸಚಿವರು

ಆಇ 13 ಇ.ಎಲ್.ಕ್ಯೂ. 2020